ಪ್ರಸ್ತಾವದ ಅಂಗೀಕಾರ

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :– "2007ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಚೇರ್ಮನ್ :– ಪ್ರಸ್ತಾವ ಏನೆಂದರೆ,

"2007ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

12. ಪ್ರಕಟಣೆ

ವಿಷಯ : ಶಾಸಕರಿಗೆ ಚಲನ ಚಿತ್ರ ಪ್ರದರ್ಶನದ ಬಗ್ಗೆ.

ಚೇರ್ಮನ್ :– ವಿಧಾನ ಮಂಡಲದ ಮಾನ್ಯ ಶಾಸಕರುಗಳಿಗೆ ಸಮಗ್ರ ವಿಕಾಸ ಕೇಂದ್ರದವರು ಅಮೇರಿಕಾ ದೇಶದ ಮಾಜಿ ಉಪಾಧ್ಯಕ್ಷ ಶ್ರೀ ಅಲ್‌ಗೋರ್‌ರವರ ನಿರ್ದೇಶನದ "An inconvenient truth-Global warming" ಚಲನಚಿತ್ರವನ್ನು ದಿನಾಂಕ : 25–6–2007 ರಂದು ಸಾಯಂಕಾಲ 6.00 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಪ್ರದರ್ಶಿಸಲು ಹಮ್ಮಿಕೊಂಡಿರುತ್ತಾರೆ. ಆದುದರಿಂದ ಆಸಕ್ತಿಯುಳ್ಳ ಸದಸ್ಯರು ಸದರಿ ಚಲನಚಿತ್ರವನ್ನು ವೀಕ್ಷಿಸಬಹುದಾಗಿದೆಯೆಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಈಗ ಸದನವನ್ನು ಮುಂದೂಡಲಾಗಿದೆ.

(26ನೇ ಗುರುವಾರ 2007ರ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಸಾಯಂಕಾಲ 5 ಗಂಟೆ 47 ನಿಮಿಷಕ್ಕೆ ಸದನವನ್ನು ಮುಂದೂಡಲಾಯಿತು)

1025 (1322) ಶ್ರೀ ಅನಿಲ್ ಹೆಚ್. ಲಾಡ್ (ಕೂಡ್ಲಿಗಿ):– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಎಂ.ಎಸ್.ಡಬ್ಲ್ಯೂ ಮಾಡಿದ ಪದವೀಧರ ಸಂಖ್ಯೆ ಹೆಚ್ಚಾಗಿದ್ದು ಇವರಿಗೆ ಸರ್ಕಾರದಿಂದ ಉದ್ಯೋಗವನ್ನು ಒದಗಿಸಲು ಇಲಾಖೆಗಳಲ್ಲಿ ಮಂಜೂರಾದ